ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 591 |
| ಮಾನ್ಯ ಸದಸ್ಯರ ಹೆಸರು | : | ಡಾ: ಉಮಾಶ್ರೀ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಪ್ರಶ್ನೆ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಭ್ರೂಣ ಹತ್ಯೆ ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br>ಒಟ್ಟು13 ಪ್ರಕರಣಗಳು ದಾಖಲಾಗಿದೆ. |
| ಆ) | ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ: ಈ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು ಕೆಳಗಿನಂತಿವೆ.<br>• ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯಡಿ ಬರುವ ಎಲ್ಲಾ ಶಾಸನಬದ್ಧ ಸಮಿತಿಗಳು ರಾಜ್ಯ ಮತ್ತು ಜಿಲ್ಲೆಗಳಲ್ಲಿ ರಚನೆಗೊಂಡಿರುತ್ತದೆ.<br>• ರಾಜ್ಯದಿಂದ "ಬಾಲಿಕಾ" ಆನ್‌ಲೈನ್ ಸಾಫ್ಟ್‌ವೇರ್ ಮುಖಾಂತರ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ನಡೆಸಲಾಗುತ್ತಿದೆ.<br>• ಅಲ್ಟ್ರಾಸೌಂಡ್ ತಯಾರಕರು, ಮಾರಾಟಗಾರರು, ರಿಪೇರಿ ಮಾಡುವವರನ್ನು ರಾಜ್ಯಮಟ್ಟದಲ್ಲಿ ನೋಂದಾಯಿಸಿ, ತ್ರೈಮಾಸಿಕ ವರದಿಯನ್ನು ಪಡೆಯಲಾಗುತ್ತಿದೆ.<br>• ರಾಜ್ಯದಲ್ಲಿ ಇದುವರೆಗೂ ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯನ್ನು ಉಲ್ಲಂಘಿಸಿರುವ ಸ್ಕ್ಯಾನಿಂಗ್ ಸೆಂಟರ್ / ಮಾಲೀಕರು/ ವೈದ್ಯರ ವಿರುದ್ಧ ಒಟ್ಟು 150 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಅವುಗಳಲ್ಲಿ 80 ಪ್ರಕರಣಗಳು ದಂಡವಿಧಿಸಲಾಗಿದೆ. 70 ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತದಲ್ಲಿ ಬಾಕಿಯಿರುತ್ತದೆ.<br>• ಹೆಣ್ಣುಭ್ರೂಣಪತ್ತೆ ಮತ್ತು ಹತ್ಯೆ ಮಾಡುವಂತಹ ಸ್ಕ್ಯಾನಿಂಗ್ ಸೆಂಟರ್ / ಆಸ್ಪತ್ರೆ/ ವೈದ್ಯರು / ದಲ್ಲಾಳಿಗಳು / ಗರ್ಭಿಣಿಯರ ಸಂಬಂಧಿಕರ ವಿರುದ್ಧ ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ಕರ್ನಾಟಕ ಸರ್ಕಾರದಿಂದ ರೂ. 50,000/-ಕ್ಕೆ ಇದ್ದ ಬಹುಮಾನವನ್ನು ರೂ.1,00,000/- ಗಳಿಗೆ ಏರಿಸಲಾಗಿದೆ.<br>• ಸರ್ಕಾರಿ ಆದೇಶ ಸಂಖ್ಯೆ: ಆಕುಕ 01 ಎಫ್.ಪಿ.ಇ. 2024, ಬೆಂಗಳೂರು, ದಿನಾಂಕ: 03.01.2024 ರಂದು ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯಕಾರ್ಯಪಡೆಯನ್ನು ರಚಿಸಲಾಗಿದೆ.<br>• ಎಂ.ಬಿ.ಬಿ.ಎಸ್ ಪದವಿ ಹೊಂದಿ ಸ್ಕ್ಯಾನಿಂಗ್ ಸೆಂಟರ್ ನಡೆಸುತ್ತಿರುವ ವೈದ್ಯರಿಗೆ ಸಾಮರ್ಥ್ಯ ಆಧಾರಿತ ಪರೀಕ್ಷೆ (Competency Based Test) ಮತ್ತುಸ್ಕ್ಯಾನಿಂಗ್ ಮಾಡಲು ಅರ್ಹ ತರಬೇತಿಯನ್ನು ಇಲಾಖೆವತಿಯಿಂದ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ. |

ರಾಜ್ಯ ಮಟ್ಟದಿಂದ ಕೆಳಕಂಡ ವಿವರದಂತೆ, ಯಶಸ್ವಿ ಗುಪ್ತಕಾರ್ಯಚಾರಣೆಯನ್ನು ಕೈಗೊಳ್ಳಲಾಗಿದೆ.

| ಕ್ರ. ಸಂ | ಜಿಲ್ಲೆಯ ಹೆಸರು | ಆಸ್ಪತ್ರೆಯ ಹೆಸರು | ಗುಪ್ತ ಕಾರ್ಯಚಾರಣೆ ನಡೆಸಿದ ದಿನಾಂಕ |
|---|---|---|---|
| 1 | ಮಂಡ್ಯ | ಸರ್ಕಾರಿ ಕ್ವ್ಯಾಟ್ರಸ್, ಪಾಂಡವಪುರ | 05-05-2024 |
| 2 | ಬೆಳಗಾವಿ | ಇಕ್ರಾ ಆಸ್ಪತ್ರೆ, ಗೋಕಾಕ್ | 15-07-2024 |
| 3 | ಮಂಡ್ಯ | ಖಾಸಗಿ ಮನೆ, ನಾಗಮಂಗಲ | 15-08-2024 |
| 4 | ಕೋಲಾರ | ದೀಪಕ್ ನರ್ಸಿಂಗ್ ಹೋಂ | 29-10-2024 |
| 5 | ರಾಮನಗರ | ಜಿಲ್ಲಾ ಆಸ್ಪತ್ರೆ | 22-08-2025 |
| 6 | ಆಂದ್ರಪ್ರದೇಶ. ಕರ್ನೂಲ್ ಜಿಲ್ಲೆ, ಕಡಮೂರು ತಾಲ್ಲೂಕು | ಬಾಷಾ ನರ್ಸಿಂಗ್ ಹೋಂ | 21-09-2025 |
| 7 | ಮೈಸೂರು | ಖಾಸಗಿ ಮನೆ, ಬನ್ನೂರು ತಾಲ್ಲೂಕು | 22-10-2025 |

ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೆಳಕಾಣಿಸಿದಂತೆ ಅರಿವು ಮೂಡಿಸಲಾಗುತ್ತಿದೆ.

- 2024-25 ನೇ ಸಾಲಿನಲ್ಲಿ ಬಸ್ ಬ್ರ್ಯಾಡಿಂಗ್, ಟ್ರೈನ್ ಬ್ರ್ಯಾಡಿಂಗ್, ಹೋರ್ಡಿಂಗ್ಸ್, ಗೋಡೆ ಬರಹ, ರೇಡಿಯೋ ಜಿಂಗಲ್ಸ್, ಟಿ.ವಿ. ಸ್ಪಾಟ್ಸ್ ಮುಖಾಂತರ ಸಾರ್ವಜನಿಕರಿಗೆ ಹೆಣ್ಣುಭ್ರೂಣ ಪತ್ತೆ ಮತ್ತು ಹತ್ಯೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.
- ದಿನಾಂಕ: 18-02-2024 ರಂದು ಜೀ ಕನ್ನಡ ಚಾನೆಲ್‌ನ ಡ್ರಾಮಾಜೂನಿಯರ್ಸ್ ಕಾರ್ಯಕ್ರಮದಲ್ಲಿ "ಹೆಣ್ಣು ಭ್ರೂಣ ಹತ್ಯೆ ಮಾಡದಂತೆ" ಸಾರ್ವಜನಿಕರಲ್ಲಿ ಜನಜಾಗೃತಿ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸಲಾಯಿತು.

ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಬಗ್ಗೆ ರಾಜ್ಯ ಮಟ್ಟದಿಂದ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಾಲಾನುಕಾಲಕ್ಕೆ ಅರಿವು ಮೂಡಿಸುವ ಕಾರ್ಯಗಾರವನ್ನು ನಡೆಸಲಾಗುತ್ತಿದೆ.

| | | |
|---|---|---|
| ಇ) | ಈ ರೀತಿ ಪ್ರಕರಣಗಳಲ್ಲಿ ಭಾಗಿಯಾಗಿರುವ ವೈದ್ಯರ ಮೇಲೆ ಸರ್ಕಾರದಿಂದ FIR ದಾಖಲಿಸಲಾಗಿದೆಯೇ: ದಾಖಲಿಸಿದ್ದಲ್ಲಿ ಇದುವರೆಗೂ ಎಷ್ಟು FIR ನ್ನು ದಾಖಲಿಸಲಾಗಿದೆ: ರಾಜ್ಯದಲ್ಲಿ ಭ್ರೂಣ ಹತ್ಯೆಯ ಬಗ್ಗೆ ಮಾಹಿತಿ ಕೊಟ್ಟವರಿಗೆ ಸರ್ಕಾರದಿಂದ ಎಷ್ಟು ಬಹುಮಾನ ನೀಡಲಾಗುತ್ತಿದೆ. | ಪ್ರಕರಣಗಳಲ್ಲಿ ಭಾಗಿಯಾಗಿರುವ ವೈದ್ಯರ ಮೇಲೆ ಸರ್ಕಾರದಿಂದ FIR ದಾಖಲಾಗಿಸಲಾಗುತ್ತಿದೆ. ಈಗಾಗಲೇ 03-ವೈದ್ಯರ ಮೇಲೆ ಹಾಗೂ ಪ್ರಕರಣಕ್ಕೆ ಸಹಕರಿಸಿದ 05-ನರ್ಸ್ ಮತ್ತು ಇತರರ ಮೇಲೆ FIR ಅನ್ನು ದಾಖಲಿಸಲಾಗಿದೆ.<br><br>ರಾಜ್ಯದಲ್ಲಿ ಭ್ರೂಣಹತ್ಯೆಯ ಬಗ್ಗೆ ಮಾಹಿತಿ ಕೊಟ್ಟವರಿಗೆ ಸರ್ಕಾರದಿಂದ ರೂ.1,00,000 (ರೂ. ಒಂದು ಲಕ್ಷಗಳು) ಬಹುಮಾನವಾಗಿ ನೀಡಲಾಗುತ್ತಿದೆ. |

| | | |
|---|---|---|
| | ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನರಿಗೆ ಈ ರೀತಿ ಬಹುಮಾನ ನೀಡಲಾಗಿದೆ? | ಕಳೆದ ಮೂರು ವರ್ಷಗಳಲ್ಲಿ 03 ಜನರಿಗೆ ಬಹುಮಾನ ನೀಡಲಾಗಿದೆ. |

ಸಂಖ್ಯೆ: ಆಕುಕ 6 ಎಸ್.ಟಿ.ಕ್ಯೂ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು